

ಕನ್ನಡಿಗರ ಈ ವಿಡಿಯೊಗಳ ವೀಕ್ಷಕರಲ್ಲಿ ಸಿಂಹಪಾಲು ಇರುವುದು ಮಹಾರಾಷ್ಟ್ರದಲ್ಲಿ ಎನ್ನುವುದು ವಿಶೇಷ. ನಂತರದ ಸ್ಥಾನ ಕರ್ನಾಟಕಕ್ಕೆ. ಬೇರೆ ಬೇರೆ ದೇಶಗಳಲ್ಲಿರುವವರೂ ಹೆಬ್ಬಾರ್ಸ್ ಕಿಚನ್ ತಿನಿಸುಗಳ ತಯಾರಿ ವಿಡಿಯೊಗಳನ್ನು ನೋಡಿ ಕಲಿತು ಖುಷಿಪಟ್ಟಿದ್ದಾರೆ.

ಮಹಾರಾಷ್ಟ್ರದಲ್ಲಿ ಇಂಟರ್ನೆಟ್ ಬಳಕೆದಾರರ ಸಂಖ್ಯೆ ಕರ್ನಾಟಕಕ್ಕಿಂತ ಜಾಸ್ತಿ ಇದೆ. ಹೀಗಾಗಿ ಅಲ್ಲಿನ ಪ್ರೇಕ್ಷಕರು ಹೆಚ್ಚಾಗಿ ವಿಡಿಯೊಗಳನ್ನು ನೋಡುತ್ತಾರೆ. ಇಂತಹ ಸೂಕ್ಷ್ಮಗಳ ಅರಿವು ಇದ್ದರಷ್ಟೇ ಯೂಟ್ಯೂಬ್ ವಿಡಿಯೊಗಳನ್ನು ಹೆಚ್ಚು ಜನರು ನೋಡುವಂತೆ ಮಾಡಬಹುದು ಎನ್ನುವುದು ಸುದರ್ಶನ್ ಅನುಭವದ ಮಾತು.

ಅವರು ಇದನ್ನೇ ಮುಂದುವರಿಸಿ ಹೀಗೆನ್ನುತ್ತಾರೆ: ‘ನಮ್ಮ ಮನೆಗಳಲ್ಲಿ ಅಮ್ಮ, ಅಕ್ಕ–ತಂಗಿ, ಚಿಕ್ಕಮ್ಮ, ದೊಡ್ಡಮ್ಮ ಹೀಗೆ ಅನೇಕರು ಚೆನ್ನಾಗಿ ಅಡುಗೆ ಮಾಡುತ್ತಿರುತ್ತಾರೆ. ಹದವರಿತಂತೆ ಪದಾರ್ಥಗಳನ್ನು ಹಾಕುವುದು ಹೇಗೆನ್ನುವುದು ಅವರಿಗೆಲ್ಲ ಗೊತ್ತು. ಆದರೆ, ಅಂತಹ ಎಲ್ಲರೂ ಯೂಟ್ಯೂಬ್ ವಿಡಿಯೊಗಳನ್ನು ಮಾಡಿ, ಖಾದ್ಯ ತಯಾರಿಯನ್ನು ವಿವರಿಸಿ ಯಶಸ್ವಿಯಾಗುವುದು ಸಾಧ್ಯವಿಲ್ಲ. ಇಲ್ಲಿ ವಾರ ವಾರಕ್ಕೂ ಟ್ರೆಂಡ್ ಬದಲಾಗುತ್ತಿರುತ್ತದೆ. ಅದರ ಮೇಲೆ ಕಣ್ಣಿಟ್ಟಿರಬೇಕು. ಸರ್ಚ್ ಎಂಜಿನ್ ಆಪ್ಟಿಮೈಸೇಷನ್ ತರಹದ ಸೂಕ್ಷ್ಮ ವಿಷಯವನ್ನು ಅರಿಯದೇ ಇದ್ದರೆ ಬಲು ಕಷ್ಟ. ನಾನು ಇಂತಹ ತಾಂತ್ರಿಕ ವಿಷಯಗಳನ್ನೆಲ್ಲ ಅಧ್ಯಯನ ಮಾಡತೊಡಗಿದೆ. ಯೂಟ್ಯೂಬ್ ವಿಡಿಯೊಗಳನ್ನು ವಿಶ್ವದಾದ್ಯಂತ ಅಸಂಖ್ಯ ಜನರು ನೋಡುವಂತೆ ಮಾಡುವುದು ಒಂದು ವಿಜ್ಞಾನ. ಜತೆಗೆ ತಂತ್ರಜ್ಞಾನ. ಅದನ್ನು ಸಂಶೋಧಿಸಿದವರ ವಿಡಿಯೊಗಳಷ್ಟೆ ಜನಪ್ರಿಯವಾಗುತ್ತವೆ.’

ಯೂಟ್ಯೂಬ್ ವಿಡಿಯೊಗಳನ್ನು ವಿಶ್ವದಾದ್ಯಂತ ಅಸಂಖ್ಯ ಜನರು ನೋಡುವಂತೆ ಮಾಡುವುದು ಒಂದು ವಿಜ್ಞಾನ. ಜತೆಗೆ ತಂತ್ರಜ್ಞಾನ. ಅದನ್ನು ಸಂಶೋಧಿಸಿದವರ ವಿಡಿಯೊಗಳಷ್ಟೆ ಜನಪ್ರಿಯವಾಗುತ್ತವೆ.